## ರಾಮಕೃಷ್ಣ-ವಿವೇಕಾನಂದ ಭಾವಧಾರೆ

# ಕರ್ನಾಟಕದಲ್ಲಿ ರಾಮಕೃಷ್ಣ ಮಹಾಸಂಘದ ಕೇಂದ್ರಗಳು

**ಸುರೇಶ್ ಮೂನ**




**ಒಂದು ಶತಮಾನಕ್ಕೂ ಹೆಚ್ಚಿನ ಕಾಲದಿಂದ ಕನ್ನಡ ಜನತೆಯ ಸೇವೆಯನ್ನು ಮಾಡುತ್ತಿರುವ ರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರಗಳು ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯ ಅವಿಭಾಜ್ಯ ಅಂಗವಾಗಿವೆ. ಇವುಗಳ ವಿಸ್ತೃತ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಬೆಂಗಳೂರಿನ ಆಚಾರ್ಯ ಪಾಠಶಾಲಾ ಪ್ರೌಢಶಾಲೆಯಲ್ಲಿ ಹಿರಿಯ ಉಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಇತಿಹಾಸದ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಇವರು, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.**

**ಸ್ವಾ**ಮಿ ವಿವೇಕಾನಂದರು, ಕನ್ನಡ ನೆಲವು ಶ್ರೀರಾಮಕೃಷ್ಣ ಪರಮಹಂಸರ ದಿವ್ಯ ಸಂದೇಶಗಳ ಪವಿತ್ರ ಬೀಜವನ್ನು ಬಿತ್ತಲು ಅತ್ಯಂತ ಫಲವತ್ತಾದ ಭೂಮಿ ಎಂದು ತಮ್ಮ ಭೇಟಿಯ ಸಮಯದಲ್ಲಿ ಅರಿತಿದ್ದರು. ಅಮೆರಿಕದಿಂದ ಅವರು ತಮ್ಮ ಪ್ರಿಯ ಶಿಷ್ಯ ಅಳಸಿಂಗ ಪೆರುಮಾಳರಿಗೆ ೧೮೯೪ ರ ಆಗಸ್ಟ್ ೨೧ ರಂದು ಬರೆದ ಪತ್ರದಲ್ಲಿ, "ಕಾಲಕ್ರಮದಲ್ಲಿ ಮೈಸೂರು (ಮೈಸೂರು ರಾಜ್ಯ) ನಮ್ಮ ಕಾರ್ಯದ ಒಂದು ಪ್ರಮುಖ ಕೇಂದ್ರವಾಗಲಿದೆ" ಎಂದು ನುಡಿದ ಭವಿಷ್ಯ ಇಂದು ಅಕ್ಷರಶಃ ನಿಜವಾಗಿದೆ. ಕರ್ನಾಟಕ ರಾಜ್ಯದಲ್ಲಿ ರಾಮಕೃಷ್ಣ ಮಹಾಸಂಘದ ಆರು ಅಧಿಕೃತ ಕೇಂದ್ರಗಳೂ ಒಂದು ಶಾರದಾ ಮಠವೂ ಇವೆ. ಅದಲ್ಲದೆ ಶ್ರೀರಾಮಕೃಷ್ಣ ಭಾವಧಾರೆಯಿಂದ ಪ್ರಭಾವಿತಗೊಂಡ ಸಂನ್ಯಾಸಿಗಳು ನಡೆಸುವ ಆಶ್ರಮಗಳು ಹಾಗು ಭಕ್ತರು ನಿರ್ವಹಿಸುವ ಕೇಂದ್ರಗಳು ವೈವಿಧ್ಯಮಯ ರೀತಿಯಲ್ಲಿ ದಿವ್ಯತ್ರಯರ ಸಂದೇಶಗಳನ್ನು ಜನಸಮಾನ್ಯರಿಗೆ ತಲುಪಿಸುತ್ತಿರುವುದಲ್ಲದೆ, ಸಮಾಜ ಸೇವಾಕಾರ್ಯಗಳಲ್ಲೂ ನಿರತವಾಗಿವೆ. ಈ ಲೇಖನದಲ್ಲಿ ಅಧಿಕೃತ ಕೇಂದ್ರಗಳ ಬಗ್ಗೆ ಮಾತ್ರ ಸಂಕ್ಷಿಪ್ತವಾಗಿ ಬರೆಯಲಾಗಿದೆ.

### ರಾಮಕೃಷ್ಣ ಮಠ, ಬೆಂಗಳೂರು

ಸ್ವಾಮಿ ವಿವೇಕಾನಂದರನ್ನು ಕಂಡಿದ್ದ ಮತ್ತು ಅವರೊಂದಿಗೆ ಸಂಪರ್ಕವನ್ನು ಹೊಂದಿದ್ದ ಕೆಲವು ಗಣ್ಯ ವ್ಯಕ್ತಿಗಳು ೧೯೦೧ರಲ್ಲಿ ಬೆಂಗಳೂರಿನಲ್ಲಿ **'ವೇದಾಂತ ಸೊಸೈಟಿ'** ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಆಗಿನ ಮೈಸೂರು ರಾಜ್ಯದ ದಿವಾನರಾಗಿದ್ದ ವಿ.ಪಿ.ಮಾಧವರಾವ್ ಅವರೂ ಸೇರಿ ಅನೇಕ ಗಣ್ಯರು ಅದರಲ್ಲಿ ಪಾಲ್ಗೊಂಡರು. ೧೯೦೩ ರಲ್ಲಿ ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು ಬೆಂಗಳೂರಿಗೆ ಬಂದಿದ್ದಾಗ ಇಲ್ಲಿ ರಾಮಕೃಷ್ಣ ಮಹಾಸಂಘದ ಶಾಖೆಯೊಂದನ್ನು ಸ್ಥಾಪಿಸುವ ಬಗ್ಗೆ ವಿಚಾರ ಮಾಡಲಾಯಿತು. ನಂತರ ೧೯೦೪ ರಲ್ಲಿ ಅವರು ಎರಡನೆಯ ಬಾರಿ ಬಂದಿದ್ದಾಗ, **'ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್'** ಅನ್ನು ಪ್ರಾರಂಭಿಸಲಾಯಿತು. ಮೈಸೂರು ಸರ್ಕಾರವು ಇದಕ್ಕಾಗಿ ಬಸವನಗುಡಿ ರಸ್ತೆಯಲ್ಲಿ ವಿಶಾಲವಾದ ಒಂದು ನಿವೇಶನವನ್ನು ನೀಡಿತು. ಸ್ವಾಮಿ ವಿವೇಕಾನಂದರ ಶಿಷ್ಯರಾಗಿದ್ದ ಸ್ವಾಮಿ ಆತ್ಮಾನಂದರು ಅದರ ಪ್ರಥಮ ಅಧ್ಯಕ್ಷರಾಗಿದ್ದರು. ಇದಕ್ಕೆ ಮೊದಲು ಕೋಟೆ ಬಡಾವಣೆಯಲ್ಲಿ ವೀರಸ್ವಾಮಿ ಮೊದಲಿಯಾರ್ ಬಂಗಲೆಯ ಒಂದು ಬಾಡಿಗೆ ಮನೆಯಲ್ಲಿ ಆಶ್ರಮವು ಕಾರ್ಯ ನಿರ್ವಹಿಸುತ್ತಿತ್ತು.



ಶ್ರೀಮಾತೆಯವರ ಶಿಲಾಸನ

ರಾಮಕೃಷ್ಣರ ಇನ್ನೊಬ್ಬ ಶಿಷ್ಯರಾದ ಸ್ವಾಮಿ ಅಭೇದಾನಂದರು ಅಮೆರಿಕದಿಂದ ಬೆಂಗಳೂರಿಗೆ, ೧೯೦೬ ರ ಜುಲೈ ೨೯ ರಂದು ಆಗಮಿಸಿದರು. ಆಗಸ್ಟ್ ೨೦ ರಂದು ಇವರು ಬಸವನಗುಡಿಯ ರಸ್ತೆಯ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ಮಾಡಿದರು. ಶ್ರೀರಾಮಕೃಷ್ಣರ ಮಾನಸಪುತ್ರರೆಂದು ಪ್ರಖ್ಯಾತರಾದವರೂ, ರಾಮಕೃಷ್ಣ ಮಠದ ಪ್ರಥಮ ಅಧ್ಯಕ್ಷರೂ ಆದ ಸ್ವಾಮಿ ಬ್ರಹ್ಮಾನಂದರು ೧೯೦೯ ರ ಜನವರಿ ೨೦ ರಂದು ಕಟ್ಟಡವನ್ನು ಉದ್ಘಾಟಿಸಿ, ಶ್ರೀರಾಮಕೃಷ್ಣರ ಭಾವಚಿತ್ರವನ್ನು ಅನಾವರಣ ಮಾಡಿದರು. ಅಂದಿನಿಂದ ಸಂಸ್ಥೆಯ ಹೆಸರನ್ನು ವಿಧ್ಯುಕ್ತವಾಗಿ **'ರಾಮಕೃಷ್ಣ ಆಶ್ರಮ'** ಎಂದು ಬದಲಿಸಲಾಯಿತು.

ತಮ್ಮ ದಕ್ಷಿಣ ಭಾರತದ ಪ್ರವಾಸದ ಸಮಯದಲ್ಲಿ ಶ್ರೀಮಾತೆಯವರು ೧೯೧೧ ರ ಮಾರ್ಚ್ ೨೪ ರಂದು ಚೆನ್ನೈನಿಂದ ಬೆಂಗಳೂರಿಗೆ ಬಂದು ಈ ಆಶ್ರಮದಲ್ಲಿ ಕೆಲವು ದಿನಗಳ ಕಾಲ ತಂಗಿದ್ದರು. ಆಶ್ರಮದ ಇತಿಹಾಸದಲ್ಲಿ ಇದೊಂದು ಮಹತ್ವಪೂರ್ಣ ಸಂಗತಿ. ಒಂದು ದಿನ ಸಂಜೆ ಶ್ರೀಮಾತೆಯವರು ಆಶ್ರಮದ ಹಿಂದಿದ್ದ ಬಂಡೆಯೊಂದರ ಮೇಲೆ ಕುಳಿತು ಧ್ಯಾನ ಮಾಡಿದರು. ಸ್ವಾಮಿ ರಾಮಕೃಷ್ಣಾನಂದರು ಈ ಸಮಯದಲ್ಲಿ ದೇವಿ ಸ್ತುತಿಯನ್ನು ಹೇಳಿ ನಮಸ್ಕಾರ ಮಾಡಿದರು. ಈಗ ಆ ಶಿಲೆಯ ಮೇಲೆ ಪುಟ್ಟ ಮಂಟಪವೊಂದನ್ನು ಕಟ್ಟಿ ಶ್ರೀಮಾತೆಯವರ ಭಾವಚಿತ್ರವನ್ನು ಇರಿಸಲಾಗಿದೆ. ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಸ್ವಾಮಿ ಶಿವಾನಂದರು ಮತ್ತು ಸ್ವಾಮಿ ವಿಜ್ಞಾನಾನಂದರೂ ಸಹ ಈ ಆಶ್ರಮಕ್ಕೆ ಆಗಮಿಸಿ ಪವಿತ್ರಗೊಳಿಸಿದ್ದಾರೆ.

ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಯತೀಶ್ವರಾನಂದರ ಪ್ರಯತ್ನದಿಂದ, **ವಿವೇಕಾನಂದ ಬಾಲಕ ಸಂಘವು** ೧೯೫೩ ರ ಏಪ್ರಿಲ್‌ನಲ್ಲಿ ಪ್ರಾರಂಭವಾಯಿತು. ಮಕ್ಕಳ ವ್ಯಕ್ತಿತ್ವವಿಕಸನಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಂಡು ಈಗಲೂ ಇದು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಹಾಗೆಯೇ ಇಲ್ಲಿನ ಯುವಕ ಸಂಘವು ಆಶ್ರಮದ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ. ಇದಲ್ಲದೆ ಆಶ್ರಮದಲ್ಲಿ ದಿವ್ಯತ್ರಯರ ಪೂಜೆ, ಆರತಿ, ಭಜನೆ, ಆಧ್ಯಾತ್ಮಿಕ ಪ್ರವಚನಗಳು, ದಿವ್ಯತ್ರಯರ ಜಯಂತ್ಯುತ್ಸವಗಳು, ಗ್ರಂಥಾಲಯ, ಧಾರ್ಮಿಕ ಗ್ರಂಥಗಳ ಪ್ರಕಟಣೆ, ಮಾರಾಟ – ಹೀಗೆ ಹತ್ತಾರು ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಕಾಲೇಜು ವಿದ್ಯಾರ್ಥಿಗಳಿಗೆ **'ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರ'** ಎಂಬ ಶಿಸ್ತುಬದ್ಧವಾದ ವಿದ್ಯಾರ್ಥಿನಿಲಯವು ೧೯೪೪ರಲ್ಲಿ ಆರಂಭವಾಗಿ ಇಂದಿಗೂ ಯಶಸ್ವಿಯಾಗಿ ನಿರ್ವಹಿಸಲ್ಪಡುತ್ತಿದ್ದು, ನಮ್ಮ ನಾಡಿನ ಉತ್ತಮ ವಿದ್ಯಾರ್ಥಿನಿಲಯಗಳಲ್ಲೊಂದು ಎಂಬ ಕೀರ್ತಿಗೆ ಪಾತ್ರವಾಗಿದೆ.

ಬೆಂಗಳೂರಿನಿಂದ ಸುಮಾರು ೩೦ ಕಿ.ಮೀ. ದೂರದಲ್ಲಿರುವ ಶಿವನಹಳ್ಳಿ ಎಂಬ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು, ಸುತ್ತಲಿನ ಹಲವಾರು ಹಳ್ಳಿಗಳಲ್ಲಿರುವ ಸಾವಿರಾರು ಗ್ರಾಮಸ್ಥರಿಗೆ ವಿವಿಧ ರೀತಿಯಲ್ಲಿ ನೆರವಾಗುವ ಕಾರ್ಯಗಳನ್ನು ಆಶ್ರಮವು ಮಾಡುತ್ತ ಬಂದಿದೆ. ವೈದ್ಯಕೀಯ ನೆರವು, ಗ್ರಾಮೀಣ ಮಕ್ಕಳಿಗೆ ವಿದ್ಯಾಭ್ಯಾಸ, ಕೃಷಿಯಲ್ಲಿ ನೆರವು – ಹೀಗೆ ಅನೇಕ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಅಲ್ಲಿ ನಡೆಸಲಾಗುತ್ತಿದೆ. ಶಿವನಹಳ್ಳಿ ಕೇಂದ್ರವನ್ನು ರಾಮಕೃಷ್ಣ ಮಿಷನ್ನಿನ ಒಂದು ಅಧಿಕೃತ ಕೇಂದ್ರವನ್ನಾಗಿ ಪರಿಗಣಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆಯಾದ ರಾಮಕೃಷ್ಣ ಮಹಾಸಂಘದ ಮೊಟ್ಟಮೊದಲ ಶಾಖೆಯಾದ ಬೆಂಗಳೂರಿನ ರಾಮಕೃಷ್ಣ ಮಠವು ಒಂದು ಹೆಮ್ಮೆಯ ಹಾಗೂ ಪ್ರತಿಷ್ಠಿತ ಆಧ್ಯಾತ್ಮಿಕ ಸಂಸ್ಥೆಯಾಗಿದ್ದು, ೨೦೦೪ ರಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸಿತು. ಈ ಮಠದ ಪ್ರಸ್ತುತ ಅಧ್ಯಕ್ಷರಾಗಿರುವವರು **ಸ್ವಾಮಿ ಹರ್ಷಾನಂದಜಿ**ಯವರು.




## ರಾಮಕೃಷ್ಣ ಮಠ, ಹಲಸೂರು, ಬೆಂಗಳೂರು.

ಸ್ವಾಮಿ ವಿವೇಕಾನಂದರ ಪ್ರಭಾವಕ್ಕೆ ಒಳಗಾದ ಬೆಂಗಳೂರಿನ ಕೆಲವು ಭಕ್ತರು ಏಕಾಂತದಲ್ಲಿ ಪ್ರಾರ್ಥನೆ, ಧ್ಯಾನಾದಿಗಳನ್ನು ಮಾಡುವುದಕ್ಕೆ ಒಂದು ಸ್ಥಳವನ್ನು ಹುಡುಕುತ್ತಿದ್ದರು. ಅವರು ಹಲಸೂರು ಪ್ರದೇಶದಲ್ಲಿ ಒಂದು ಚಿಕ್ಕ ಕುಟೀರವನ್ನು ವ್ಯವಸ್ಥೆ ಮಾಡಿಕೊಂಡರು. ಅಲ್ಲಿ ಪ್ರತಿನಿತ್ಯ ಸಂಜೆ ಒಟ್ಟುಗೂಡಿ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುತ್ತಿದ್ದರು. ಆ ಕಟ್ಟಡದಲ್ಲಿ, ಒಂದು ಸಣ್ಣ ಪೂಜಾಗೃಹ ಹಾಗೂ ಪ್ರಾರ್ಥನಾಮಂದಿರಗಳು ಮಾತ್ರವೇ ಇದ್ದವು. ಭಕ್ತರ ಕೋರಿಕೆಯ ಮೇರೆಗೆ ಸ್ವಾಮಿ ವಿಮಲಾನಂದಜಿ ಅವರು ಮೇ ೬, ೧೯೦೬ ರಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿದರು. ಈ ಆಶ್ರಮವು ಬಹಳ ವರ್ಷಗಳ ಕಾಲ ಬೆಂಗಳೂರಿನ ರಾಮಕೃಷ್ಣ ಆಶ್ರಮದ ಅಂಗಸಂಸ್ಥೆಯಾಗಿ ಸೇವೆ ನಿರ್ವಹಿಸುತ್ತಿತ್ತು. ಜನವರಿ ೧, ೧೯೯೯ ರಿಂದ ಇದು ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರದ ನೇರ ಶಾಖಾ ಕೇಂದ್ರವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ. ಈ ಮಠವು ಈಗ ಹಲವಾರು ಸೇವಾಕಾರ್ಯಗಳನ್ನು ನಿರ್ವಹಿಸುತ್ತಿದೆ.

ಮಠದ ಶಾಂತ, ಸುಂದರ ಮತ್ತು ರಮ್ಯ ವಾತಾವರಣದ ಮಧ್ಯದಲ್ಲಿರುವ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಮಂದಿರವು ಧ್ಯಾನವನ್ನು ಮಾಡಲು ಹಾಗು ಶಾಂತಿ–ನೆಮ್ಮದಿಯನ್ನು ಆಸ್ವಾದಿಸಲು ತಕ್ಕುದಾದ ತಾಣವಾಗಿದೆ. ಈ ಆವರಣದಲ್ಲಿ ಸ್ವಾಮಿ ವಿವೇಕಾನಂದರು ಧ್ಯಾನದ ಭಂಗಿಯಲ್ಲಿ ಕುಳಿತಿರುವ ಸುಮಾರು ೨೦ ಅಡಿ ಎತ್ತರದ ಮೂರ್ತಿಯು ಬಹಳ ಅಪರೂಪದ್ದಾಗಿದೆ. ಈ ಮಠವು ತಮ್ಮ ಕಾರ್ಯಕ್ಷೇತ್ರದಿಂದ ನಿವೃತ್ತರಾದ ವೃದ್ಧಸಾಧುಗಳ ವಿಶ್ರಾಂತಿ ಕೇಂದ್ರವಾಗಿದೆ. ಪ್ರತಿದಿನದ ಕಾರ್ಯಕ್ರಮಗಳನ್ನು ಹೊರತುಪಡಿಸಿ ಮಠವು ಪ್ರಮುಖ ಹಬ್ಬಗಳಾದ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ, ಸ್ವಾಮಿ ವಿವೇಕಾನಂದರು ಮುಂತಾದ ಹಲವಾರು ಸಂತರ ಜಯಂತ್ಯುತ್ಸವಗಳನ್ನು ಆಚರಿಸುತ್ತಿದೆ. ಭಕ್ತರ ಆಧ್ಯಾತ್ಮಿಕ ಉನ್ನತಿಗಾಗಿ ಮಠದಲ್ಲಿ ಆಧ್ಯಾತ್ಮಿಕ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.

ಆಶ್ರಮವು ಬಡ ಜನತೆಗಾಗಿ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸುತ್ತದೆ. ವೈದ್ಯಕೀಯ ಸೇವಾಕಾರ್ಯಗಳಿಗಾಗಿ ನಾಲ್ಕು ಅಂತಸ್ತಿನ ಔಷಧಾಲಯದ ಕಟ್ಟಡವು ನಿರ್ಮಾಣವಾಗಿದೆ.

ಪ್ರತಿದಿನ ಬೆಳಿಗ್ಗೆ ಯೋಗ ತರಬೇತಿಯನ್ನು ಸಾರ್ವಜನಿಕರಿಗೆ ಆಯೋಜಿಸಲಾಗಿದೆ. ಬಾಲಕರಲ್ಲಿ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸಲು ಬಾಲಕ ಸಂಘ ಹಾಗೂ ಯುವಕ ಸಂಘಗಳನ್ನು ಕೂಡ ನಡೆಸಲಾಗುತ್ತಿದೆ. ಪ್ರತಿ ವರ್ಷದ ಬೇಸಿಗೆಯಲ್ಲಿ ವಿದ್ಯಾರ್ಥಿಗಳಿಗಾಗಿ ಬೇಸಿಗೆ ಶಿಬಿರಗಳನ್ನು ನಡೆಸಿ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಶೈಕ್ಷಣಿಕ ಸೇವೆಯ ರೂಪದಲ್ಲಿ ಹತ್ತಿರದ ಎರಡು ಸರ್ಕಾರಿ ಶಾಲೆಗಳ ಮಕ್ಕಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ. ಅದೇ ರೀತಿ ಸಾತನೂರು ತಾಲ್ಲೂಕಿನಲ್ಲಿ ೨೦ ಉಚಿತ ಶಿಕ್ಷಣ ತರಬೇತಿ ಕೇಂದ್ರಗಳನ್ನೂ ನಡೆಸಲಾಗುತ್ತಿದೆ. ಈ ಮಠದ ಪ್ರಸ್ತುತ ಅಧ್ಯಕ್ಷರಾಗಿರುವವರು ಸ್ವಾಮಿ ವೀತಭಯಾನಂದಜಿಯವರು.

## ಶ್ರೀರಾಮಕೃಷ್ಣ ಆಶ್ರಮ, ಮೈಸೂರು

೧೮೯೨ರಲ್ಲಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಆಗಮಿಸಿ ಆಗಿನ ಮಹಾರಾಜರಾದ ಚಾಮರಾಜ ಒಡೆಯರ ಆತಿಥ್ಯವನ್ನು ಸ್ವೀಕರಿಸಿ ತೆರಳಿದ ಒಂದು ದಶಕದ ನಂತರ, ಅಂದರೆ ೧೯೦೩ ರಲ್ಲಿ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ

ರಾಮಕೃಷ್ಣಾನಂದರು ಹಾಗೂ ೧೯೦೬ ರಲ್ಲಿ ಸ್ವಾಮಿ ಅಭೇದಾನಂದರು ಈ ನಗರಕ್ಕೆ ಭೇಟಿ ಕೊಟ್ಟು ಹಲವು ಪ್ರವಚನಗಳನ್ನು ನೀಡಿದರು. ೧೯೧೭ ರಲ್ಲಿ ಮೈಸೂರಿನ ಭಕ್ತವೃಂದದವರೆಲ್ಲರೂ ಸೇರಿ ರಾಮಕೃಷ್ಣ ಆಂದೋಲನದ ಧ್ಯೇಯಗಳಲ್ಲಿ ಆಸಕ್ತಿ ಇರುವವರನ್ನೆಲ್ಲ ಒಂದುಗೂಡಿಸುವ ಹಾಗೂ ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವಗಳನ್ನು ಆಚರಿಸುವ ಉದ್ದೇಶದಿಂದ **'ರಾಮಕೃಷ್ಣ ಸಮಾಜ'** ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಸಮಾಜದ ಮೂಲಕ ಪರಿಶಿಷ್ಟ ಪಂಗಡದವರ ಕ್ಷೇಯೋಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಯಿತು.

೧೯೨೫ ರ ಆದಿಭಾಗದಲ್ಲಿ ಸ್ವಾಮಿ ಶ್ರೀವಾಸಾನಂದರೆಂಬ ಸ್ವಾಮಿಗಳು ಮೈಸೂರಿಗೆ ಬಂದರು. ಅವರು ಶ್ರೀಮಾತೆ ಶಾರದಾ ದೇವಿಯವರ ಶಿಷ್ಯರು. ರಾಮಕೃಷ್ಣ ಸಮಾಜವು ಏರ್ಪಡಿಸಿದ್ದ ಆದಿಕರ್ನಾಟಕರ ಸಮ್ಮೇಳನದಲ್ಲಿ ಅವರು ಭಾಷಣ ಮಾಡಿದರು. ಇದರಿಂದಾಗಿ, ರಾಮಕೃಷ್ಣ ಮಹಾಸಂಘದ ಶಾಖೆಯೊಂದು ಮೈಸೂರಿನಲ್ಲೂ ಪ್ರಾರಂಭಗೊಳ್ಳಬೇಕು ಎಂಬ ಅಭಿಲಾಷೆ ಅಲ್ಲಿನ ಸ್ಥಳೀಯರಲ್ಲಿ ಮೂಡಿತು. ಅದರ ಪರಿಣಾಮವಾಗಿ ಗಣ್ಯ ವ್ಯಕ್ತಿಗಳ ಸಮಿತಿಯೊಂದು ರಚಿಸಲ್ಪಟ್ಟು, ರಾಮಕೃಷ್ಣ ಮಠದ ಶಾಖೆಯೊಂದು ಮೈಸೂರಿನಲ್ಲಿ ಪ್ರಾರಂಭಗೊಳ್ಳಬೇಕೆಂಬುದರ ಬಗ್ಗೆ ಮಹಾಸಂಘದ ಮುಖ್ಯ ಕೇಂದ್ರವಾದ ಬೇಲೂರು ಮಠಕ್ಕೆ ಮನವಿಯನ್ನು ಸಲ್ಲಿಸಬೇಕೆಂದು ನಿರ್ಧರಿಸಿತು. ಆಗ ಮದ್ರಾಸ್ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶರ್ವಾನಂದರ ಸತತ ಪ್ರಯತ್ನದಿಂದಾಗಿ ಮೈಸೂರಿನ ಆಶ್ರಮ ಪ್ರಾರಂಭವಾಯಿತು. ಈ ಸಂಬಂಧವಾಗಿ ಏರ್ಪಡಿಸಿದ್ದ ನಾಲ್ಕು ದಿನಗಳ ಪ್ರವಚನ ಮಾಲೆಯ ಕಾರ್ಯಕ್ರಮದಲ್ಲಿ ಸ್ವಾಮಿ ನಿರ್ಮಲಾನಂದರು, ಸ್ವಾಮಿ ಶ್ರೀವಾಸಾನಂದರು ಮತ್ತು ಸ್ವಾಮಿ ಶರ್ವಾನಂದರು ರಾಜಯೋಗ, ಭಕ್ತಿಯೋಗ ಮುಂತಾದ ವಿಷಯಗಳ ಬಗ್ಗೆ ಪ್ರವಚನಗಳನ್ನು ನೀಡಿದರು.

ಆಶ್ರಮದ ಪ್ರಥಮ ಅಧ್ಯಕ್ಷರಾಗಿ ಸ್ವಾಮಿ ಸಿದ್ಧೇಶ್ವರಾನಂದರು ನೇಮಕಗೊಂಡರು. ಮರಿಮಲ್ಲಪ್ಪ ಪ್ರೌಢಶಾಲೆಯ ಹತ್ತಿರದಲ್ಲಿ ಇದ್ದ ಒಂದು ಬಾಡಿಗೆ ಮನೆಯಲ್ಲಿ ಆಶ್ರಮವು ಪ್ರಾರಂಭವಾಯಿತು. ಸ್ವಲ್ಪ ಸಮಯದ ನಂತರ ಕೃಷ್ಣಮೂರ್ತಿಪುರದ ಬಾಡಿಗೆ ಮನೆಗೆ ಅದು ವರ್ಗಾವಣೆಗೊಂಡಿತು. ೧೯೩೧ ರಲ್ಲಿ ಮೈಸೂರು ಮಹಾರಾಜರ ಸಲಹೆಯ ಮೇರೆಗೆ, ಆಗಿನ ನಗರ ಪಾಲಿಕೆಯು ವಾಣಿವಿಲಾಸ ಮೊಹಲ್ಲಾದಲ್ಲಿ ಎರಡು ಎಕರೆ ಜಾಗವನ್ನು ಕೊಟ್ಟಿತು. ೫,೦೦೦ ರೂಪಾಯಿಗಳ ದೇಣಿಗೆಯನ್ನು ಸಂಗ್ರಹಿಸಿ, ಅಲ್ಲಿ ಒಂದು ಸಣ್ಣ ಕಟ್ಟಡವನ್ನು ನಿರ್ಮಿಸಲಾಯಿತು. ೧೯೩೧ ರ ಫೆಬ್ರವರಿ ತಿಂಗಳಿನಲ್ಲಿ ಆಶ್ರಮವನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಈ ಆಶ್ರಮವನ್ನು ಸೇರಿದ ಮೊದಲ ಬ್ರಹ್ಮಚಾರಿ ಎಂದರೆ ನಂತರ ರಾಮಕೃಷ್ಣ ಮಹಾಸಂಘದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ ಸ್ವಾಮಿ ರಂಗನಾಥಾನಂದಜಿಯವರು. ರಾಷ್ಟ್ರಕವಿ ಕುವೆಂಪು ಅವರು ತಮ್ಮ ವಿದ್ಯಾರ್ಥಿದೆಸೆಯ ಸುಮಾರು ೧೩ ವರ್ಷಗಳ ಕಾಲವನ್ನು ಈ ಆಶ್ರಮದಲ್ಲಿ ಕಳೆದಿದ್ದರು.

ಈ ಆಶ್ರಮದ ಕಡೆಯಿಂದ ೧೯೨೧ ರಲ್ಲೇ ವಿದ್ಯಾರ್ಥಿಗಳಿಗಾಗಿ ವಸತಿಮಂದಿರವೊಂದನ್ನು ಆರಂಭಿಸಲಾಗಿತ್ತು ಎಂಬುದು ಗಮನಾರ್ಹ ಸಂಗತಿ. ೧೯೩೭ ರಲ್ಲಿ ವಸತಿ ಮಂದಿರದ ಕಟ್ಟಡಕ್ಕಾಗಿ ಶಂಕುಸ್ಥಾಪನೆಯನ್ನು ನೆರವೇರಿಸಲಾಗಿತ್ತು. ೧೯೩೪ ರಲ್ಲಿ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳಿಗಾಗಿ ಅಧ್ಯಯನ ಕೇಂದ್ರವೊಂದನ್ನು ಪ್ರಾರಂಭಿಸಲಾಗಿತ್ತು. ೧೯೪೧ ರಲ್ಲಿ ಪೊನ್ನಂಪೇಟೆ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಾಂಭವಾನಂದಜಿಯವರು ಮೈಸೂರು ಆಶ್ರಮಕ್ಕೆ ಅಧ್ಯಕ್ಷರಾಗಿ ಬಂದರು. ಅವರ ನೇತೃತ್ವದಲ್ಲಿ ಮೈಸೂರು ಆಶ್ರಮವು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಿತು.

೧೯೪೩-೪೪ರ ಸುಮಾರಿಗೆ ಶಾಂಭವಾನಂದಜಿ ಅವರು ವಿದ್ಯಾರ್ಥಿಗಳಿಗಾಗಿ ಭವ್ಯವಾದ ವಸತಿಗೃಹವೊಂದರ ನಿರ್ಮಾಣಕ್ಕೆ ಚಾಲನೆ ನೀಡಿದರು.



ಒಂಟಿಕೊಪ್ಪಲಿನ ರೈಲ್ವೆ ಕಾಲೋನಿಯ ಸಮೀಪದಲ್ಲಿ ಸುಮಾರು ೭೦ ಎಕರೆಗಳ ವಿಸ್ತಾರದ ಜಾಗವನ್ನು ಪಡೆದದ್ದು ಇವರ ಅತ್ಯದ್ಭುತ ಸಾಧನೆ. ಕಟ್ಟಡ ನಿರ್ಮಾಣಕ್ಕಾಗಿ ಮತ್ತು ಧನಸಂಗ್ರಹಣೆಗಾಗಿ ಇವರು ವಿಶೇಷವಾಗಿ ಶ್ರಮವಹಿಸಿದರು. ೧೯೪೯ ರಲ್ಲಿ ಆಗಿನ ಭಾರತದ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜ ಗೋಪಾಲಾಚಾರಿಯವರು ಈ ವಿದ್ಯಾರ್ಥಿನಿಲಯದ ಉದ್ಘಾಟನೆಯನ್ನು ಮಾಡಿದರು. ಈ ನಿಲಯವೇ ಮುಂದೆ ವಸತಿಶಾಲೆಯಾಗಿ ಪರಿವರ್ತನೆ ಹೊಂದಿ ಇಂದು ಮೌಲ್ಯಾಧಾರಿತ ಶಿಕ್ಷಣಕ್ಕೆ ದೇಶದಾದ್ಯಂತ ಹೆಸರುವಾಸಿಯಾಗಿರುವ **ಶ್ರೀರಾಮಕೃಷ್ಣ ವಿದ್ಯಾಶಾಲೆ**ಯಾಗಿ ರೂಪುಗೊಂಡಿದೆ. ಇಲ್ಲಿನ ಈಜುಕೊಳವನ್ನು ೧೯೫೭ ರಲ್ಲಿ ಆಗಿನ ಪ್ರಧಾನಿ ಜವಾಹರ ಲಾಲ್ ನೆಹರು ಉದ್ಘಾಟಿಸಿದರು. ೧೯೭೯ ರಲ್ಲಿ ಇಲ್ಲಿ ಪಿ.ಯು.ಸಿ ವಿಭಾಗವನ್ನು ಪ್ರಾರಂಭಿಸಲಾಯಿತು.

ಸ್ವಾಮಿ ಶಾಂಭವಾನಂದಜಿ ಅವರು ನೈತಿಕ ಹಾಗು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಶಿಕ್ಷಕರಿಗೆ ತರಬೇತಿ ಕೊಡುವ ಒಂದು ಸಂಸ್ಥೆಯನ್ನು ಪ್ರಾರಂಭಿಸುವ ಅಭಿಲಾಷೆಯನ್ನು ಹೊಂದಿದ್ದರು. ಅದು ಕೈಗೂಡಿ ಇಂದು **'ರಾಮಕೃಷ್ಣ ನೈತಿಕ ಹಾಗು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ'** ಯಾಗಿ ರೂಪುಗೊಂಡಿದೆ. ನಮ್ಮ ದೇಶದಲ್ಲೇ ಅಪರೂಪದ ಸಂಸ್ಥೆ ಎಂಬ ಹೆಗ್ಗಳಿಕೆ ಇದರದ್ದು. ಇದರ ಕಟ್ಟಡವೂ ವಿಶಾಲವಾಗಿದ್ದು ೧೫೦ಕ್ಕೂ ಹೆಚ್ಚು ಕೊಠಡಿಗಳನ್ನು ಹೊಂದಿದೆ. ೧೯೬೮ ರಲ್ಲಿ ಮೊರಾರ್ಜಿ ದೇಸಾಯಿ ಅವರು ಇದರ ಶಂಕುಸ್ಥಾಪನೆ ಮಾಡಿದರು. ಸುಮಾರು ೩೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಕಟ್ಟಡವು ೧೯೭೪ ರಲ್ಲಿ ಪೂರ್ಣವಾಯಿತು. ಇದನ್ನು ರಾಮಕೃಷ್ಣ ಮಹಾಸಂಘದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿಯವರು ಉದ್ಘಾಟಿಸಿದರು. ಈ ಸಂಸ್ಥೆಯಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಆಧರಿಸಿದ ಬಿ.ಎಡ್ ತರಗತಿಗಳು ಮತ್ತು ಶಾಲಾ ಶಿಕ್ಷಕರಿಗಾಗಿ ಕಾರ್ಯಾಗಾರಗಳು ನಡೆಯುತ್ತಿವೆ. ಅಲ್ಲದೆ ಆಗಾಗ್ಗೆ ವಿವಿಧ ವರ್ಗದ ಜನರಿಗಾಗಿ ಶೈಕ್ಷಣಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಿಬಿರಗಳನ್ನು ಕೂಡ ಏರ್ಪಡಿಸಲಾಗುತ್ತಿದೆ.

ಮೈಸೂರು ಆಶ್ರಮದ ಇನ್ನೊಂದು ಬಹುಮುಖ್ಯ ಯೋಜನೆಯೆಂದರೆ ಕನ್ನಡ ಪುಸ್ತಕಗಳ ಪ್ರಕಾಶನ. ಇಲ್ಲಿ ಪ್ರಕಟಗೊಳ್ಳುವ ಧಾರ್ಮಿಕ ಪುಸ್ತಕಗಳು ನಾಡಿನಾದ್ಯಂತ ಜನಪ್ರಿಯವಾಗಿವೆ. ರಾಷ್ಟ್ರಕವಿ ಕುವೆಂಪು ಅವರ **ಸ್ವಾಮಿ ವಿವೇಕಾನಂದ** ಕೃತಿಯಂತೂ ತನ್ನ ಅದ್ಭುತ ಶೈಲಿ ಮತ್ತು ಭಾಷೆಯ ಓಜಸ್ಸಿನಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿದೆ. ಸ್ವಾಮಿ ಸೋಮನಾಥಾನಂದಜಿಯವರು ಈ ಪ್ರಕಾಶನದ ವಿಭಾಗವನ್ನು ಸುಮಾರು ಐದು ದಶಕಗಳ ಅವಧಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ರೂಪಿಸಿದ್ದಾರೆ. ಜನವರಿ ೨೦೦೦ ರಿಂದ ಈ ಆಶ್ರಮವು ಪ್ರಾರಂಭಿಸಿದ **ವಿವೇಕಪ್ರಭ** ಎಂಬ ಮಾಸಪತ್ರಿಕೆಯು ವಿಚಾರಪೂರ್ಣ ಹಾಗೂ ಪ್ರಬುದ್ಧ ಲೇಖನಗಳನ್ನು ಹೊಂದಿದ್ದು ಅತ್ಯಂತ ಜನಪ್ರಿಯವಾಗಿದೆ. ಪ್ರತಿ ತಿಂಗಳು ೨೨,೦೦೦ ಪ್ರತಿಗಳು ವಿತರಣೆಹೊಂದುತ್ತಿವೆ.


ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ

ಹಿಂದುಳಿದ ಜನರ ಮಕ್ಕಳಿಗೆ ಉಚಿತ ಶೈಕ್ಷಣಿಕ ನೆರವು ನೀಡುವ **ವಿವೇಕಶಿಕ್ಷಣ** ಎಂಬ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ನಿರ್ಮಾಣದ ವಿಚಾರಗಳನ್ನು ಹರಡಲು **ಜ್ಞಾನವಾಹಿನಿ** ಎಂಬ ಸಂಚಾರಿ ಅಭಿಯಾನವನ್ನು ಆಶ್ರಮವು ಹಮ್ಮಿಕೊಂಡಿದೆ. ಸಮಾಜದ ಉಪೇಕ್ಷಿತ ಜನಾಂಗಕ್ಕಾಗಿ ವಿಶೇಷ ಶಿಬಿರಗಳ ಆಯೋಜನೆ, ಶಾಲಾ ಶಿಕ್ಷಕರಿಗಾಗಿ ನೈತಿಕ ಶಿಕ್ಷಣ ಶಿಬಿರಗಳು, **ಶಾರದಾ ಜ್ಞಾನಸುಧಾ** ಎಂಬ ಶಾಲಾಕಾಲೇಜು ವಿದ್ಯಾರ್ಥಿ ಗಳು ಮತ್ತು ಉಪಾಧ್ಯಾಯರಿಗಾಗಿ ರಾಜ್ಯವ್ಯಾಪಿ ರಸಪ್ರಶ್ನೆ ಕಾರ್ಯಕ್ರಮ – ಇವು ಇನ್ನಿತರ ಚಟುವಟಿಕೆಗಳು. ಇತ್ತೀಚಿಗೆ ಉತ್ತರ ಕರ್ನಾಟಕದಲ್ಲಿ ಉಂಟಾದ ಭಾರೀ ಮಳೆ ಮತ್ತು ಪ್ರವಾಹದಿಂದ ಸಂತ್ರಸ್ತರಾದ ಜನತೆಯ ನೆರವಿಗೆ ಈ ಆಶ್ರಮದ ಸಂನ್ಯಾಸಿಗಳು ಮುಂದಾದರು. ಆಶ್ರಮದ ಈಗಿನ ಅಧ್ಯಕ್ಷರು **ಸ್ವಾಮಿ ನಿತ್ಯಸ್ಥಾನಂದಜಿ** ಅವರು. *(ಮುಂದುವರಿಯುವುದು)*